ಅ) ಕಳೆದ ೩ ವರ್ಷಗಳಲ್ಲಿ ಅರಣ್ಯ ಇಲಾಖೆಗೆ ವರ್ಗಾಯಿಸಲ್ಪಟ್ಟ ಸರ್ಕಾರಿ ಭೂಮಿ ಎಷ್ಟು?

ಇ) ಸದರಿ ಭೂಮಿಯನ್ನು ಸಾಗುವಳಿ ಮಾಡುತ್ತಿರುವ ರೈತರಿಗೆ ಆದರ ಹಕ್ಕು ನೀಡಿ ಅವರಿಗೆ ಖಾಯಂ ಮಾಡುವ ಭರವಸೆಯನ್ನು ಸರ್ಕಾರದವರು ನೀಡುವರೆ ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ರಾಜ್ಯದಲ್ಲಿ ಭೂ ಸಮೀಕ್ಷೆ ಮಾಡಿ 'ಸಿ ಮತ್ತು ಡಿ' ಎಂದು ಪರಿಗಣಿಸಿದ ಭೂಮಿಯ ಜಿಲ್ಲಾವಾರು ವಿಸ್ತೀರ್ಣ ಈ ಕೆಳಕಂಡಂತಿದೆ.

ಕ್ರ. ಸ.	ಜಿಲ್ಲೆಯ ಹೆಸರು	ವಿಸ್ತೀರ್ಣ
		ಎ—ಗು
೧.	ಬೆಂಗಳೂರು	೮೩,೩೭೧—೨೨
೨.	ಕೋಲಾರ	೨,೧೯,೯೭೦—೨೧
೩.	ತುಮಕೂರು	೨,೮೦,೧೨೭—೦೧
೪.	ಶಿವಮೊಗ್ಗ	೨,೭೪,೭೩೪—೨೫
೫.	ಚಿತ್ರದುರ್ಗ	೧,೭೪,೩೦೮—೩೮
೬.	ಮೈಸೂರು	೫೫,೭೯೦—೨೪
೭.	ಮಂಡ್ಯ	೧,೦೩,೮೪೦—೨೬
೮.	ಹಾಸನ	೯೦,೪೪೦—೦೪
೯.	ಚಿಕ್ಕಮಗಳೂರು	೧,೩೧,೨೭೩—೩೧
೧೦.	ದಕ್ಷಿಣ ಕನ್ನಡ	೩,೧೪,೦೩೩—೮೯
೧೧.	ಕೊಡಗು	೬೭,೦೫೦—೦೦
೧೨.	ಬೆಳಗಾಂ	೧೧,೯೭೩—೩೨
೧೩.	ಧಾರವಾಡ	೧೯,೮೮೭—೦೦
೧೪.	ಉತ್ತರ ಕನ್ನಡ	೧,೯೧೬—೨೨
೧೫.	ಬಿಜಾಪುರ	೪,೨೨೩—೧೭
೧೬.	ಗುಲ್ಬರ್ಗ	೨,೩೧,೦೬೮—೧೩
೧೭.	ಬಳ್ಳಾರಿ	೧,೮೮,೧೭೩—೨೦
೧೮.	ಬೀದರ್	ಯಾವುದೂ ಇಲ್ಲ
೧೯.	ರಾಯಚೂರು	ವಿವರಗಳ ಇನ್ನೂ ಬಂದಿಲ್ಲ. ನಂತರ ಒದಗಿಸಲಾಗುವುದು.

ಆ) ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಇಲಾಖೆಗೆ ವರ್ಗಾಯಿಸಲ್ಪಟ್ಟ ಸರ್ಕಾರಿ ಭೂಮಿಯ ವಿಸ್ತೀರ್ಣ ಸುಮಾರು ೧೨, ೫೬,೩೭೦ ಎಕರೆ ೧೭ ಗುಂಟೆಗಳು. (ರಾಯಚೂರು ಜಿಲ್ಲೆ ಬಿಟ್ಟಿದೆ)

ಇ) ಕೇಂದ್ರ ಸರ್ಕಾರದ ಅರಣ್ಯ ಸಂರಕ್ಷಣಾ ಕಾಯಿದೆ ೧೯೮೦ರ ಪ್ರಕಾರ ಅರಣ್ಯ ಇಲಾಖೆಗೆ ಸೇರಿದ ಜಮೀನನ್ನು ಸಾಗುವಳಿಗೆ ರೈತರಿಗೆ ಕೊಡಲು ಸಧ್ಯಕ್ಕೆ ಬರುವುದಿಲ್ಲ.

ಸಿಂಧನೂರು ನಗರಕ್ಕೆ ಕುಡಿಯುವ ನೀರಿನ ಯೋಜನೆ

೧೯೫೦. ಶ್ರೀ ಎಂ. ಮಲ್ಲಪ್ಪ (ಸಿಂಧನೂರು).— ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧) ಸಿಂಧನೂರು ನಗರಕ್ಕೆ ಹಾಲಿ ಇರುವ ಕುಡಿಯುವ ನೀರಿನ ಪೂರೈಕೆಯು ಅಸಮರ್ಪಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

೨) ಹಾಗಿದ್ದಲ್ಲಿ ಶಾಶ್ವತ ಪರಿಹಾರಕ್ಕಾಗಿ ತುಂಗಭದ್ರ ನದಿಯಿಂದ ಕಂಡಿಯಂುವ ನೀರನ್ನು ಒದಗಿಸಲು ಸರ್ಕಾರದ ಪರಿಶೀಲನೆಯಲ್ಲಿದೆಯೆ ?

೩) ಹಾಗಿದ್ದಲ್ಲಿ ಇದನ್ನು ಎಷ್ಟು ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

೧) ಬಂದಿದೆ.

೨) ಈ ವಿಷಯವು ಕರ್ನಾಟಕ ನಗರ ನೀರಂ ಸರಬರಾಜು ಮತ್ತು ಒಳಚರಂಡಿ ಮಂಡಲಿಯ ಪರಿಶೀಲನೆಯಲ್ಲಿದೆ.

೩) ಸಿಂಧನೂರು ಪುರಸಭೆಯಂವರಂ ಇದಕ್ಕೆ ತಗಲಂವ ಸರ್ವೆ ಹಣವನ್ನು ಪಾವತಿ ಮಾಡದೇ ಇರಂವುದರಿಂದ ಇದರ ತನಿಖಾ ಕೆಲಸವು ಸ್ಥಗಿತಗೊಂಡಿದೆ.

ವಿದ್ಯುತ್ ಕೊರತೆ ಮತ್ತು ವಿದ್ಯುತ್ ಉತ್ಪಾದನೆ

೧೧೭೭. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಅಬಕಾರಿ, ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳಂ ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ವಿದ್ಯುತ್ ಉತ್ಪಾದನಾ ಕೇಂದ್ರಗಳು ಎಷ್ಟಿವೆ ಹಾಗೂ ಯಾವ ಯಾವ ವಿದ್ಯುತ್ ಕೇಂದ್ರದಲ್ಲಿ ಎಷೆಷ್ಟು ಹಾಲಿ ವಿದ್ಯುತ್ ಉತ್ಪಾದನೆಯಾಗುತ್ತಿದೆ;

ಆ) ಎಷ್ಟು ವಿದ್ಯುತ್ ಕೇಂದ್ರಗಳು ನಿರ್ಮಾಣದಲ್ಲಿವೆ ಹಾಗೂ ಅವುಗಳು ಯಾವಾಗ ಪೂರ್ಣಗೊಂಡಂ ಉತ್ಪಾದನಾ ಆರಂಭಿಸಂವುದು;

ಇ) ಈಗ ನಿರ್ಮಾಣ ಆಗುತ್ತಿರುವ ವಿದ್ಯುತ್ ಕೇಂದ್ರಗಳು ಪೂರ್ಣಗೊಂಡರೂ ಸಹ ರಾಜ್ಯದಲ್ಲಿರುವ ವಿದ್ಯುತ್ ಕೊರತೆ ಎಷ್ಟು (ವಿವರಗಳೊಂದಿಗೆ ಅಪೇಕ್ಷಿಸಲಾಗಿದೆ);

ಈ) ಕೃಷಿ ಕೈಗಾರಿಕೆ, ಗೃಹಬಳಕೆ ಇತ್ಯಾದಿಗಳಿಗೆ ನಮ್ಮ ರಾಜ್ಯದಲ್ಲಿ ಅಗತ್ಯವಾಗಿರುವ ವಿದ್ಯುತ್ ಶಕ್ತಿ ಎಷ್ಟು ಹಾಗೂ ಈಗ ಎಷ್ಟು ಪೂರೈಕೆ ಆಗುತ್ತಿದೆ?

ಉ) ೧೯೮೫-೧೯೯೦ ರಲ್ಲಿ ವಿದ್ಯುತ್ ಎಷ್ಟು ಅಗತ್ಯವಾಗುವುದು ಹಾಗೂ ಆಗ ಎಷ್ಟೆಷ್ಟು ಪೂರೈಕೆ ಆಗಬಹುದು ಎಂಬ ವಿವರಗಳನುನ್ನು ಯೋಜಿಸಲಾಗಿದೆಯೆ (ವಿವರಗಳನ್ನು ಅಪೇಕ್ಷಿಸಲಾಗಿದೆ)?

ಊ) ರಾಜ್ಯದಲ್ಲಿ ಇನ್ನೂ ಯಾವ ಯಾವ ರೀತಿಯಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ವಿದ್ಯುತ್ ಉತ್ಪಾದನೆಯ ಸಾಧ್ಯತೆ ಇದೆ ; ಇವುಗಳನ್ನು ಕೈಗೂಳ್ಳಲು ಸರ್ಕಾರದವರು ಕೈಗೊಂಡಿರುವ ಮತ್ತು ಕೈಗೊಳ್ಳಲಿರುವ ಕಾರ್ಯಕ್ರಮವೇನು ?

ಶ್ರೀ ಜೆ. ಹೆಚ್. ಪಟೇಲ್ (ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು.).—

ಅ) ರಾಜ್ಯದಲ್ಲಿ ಒಟ್ಟು ೯ ವಿದ್ಯುತ್ ಉತ್ಪಾದನಾ ಕೇಂದ್ರಗಳು ಈಗ ಕಾರ್ಯರೂಪದಲ್ಲಿವೆ. ಅವುಗಳ ವಿವರಗಳನ್ನು ಕೆಳಗೆ ತಿಳಿಸಿರುವಂತಿದೆ.

೧) ಶರಾವತಿ ಜನರೇಟಿಂಗ್ ಸ್ಟೇಷನ್	...	೪೬೦	ಎಂ.ಯು	
೨) ಇಂಡಾತ್ಮಗಾಂಧಿ ಹೈಡ್ರೋ ಎಲೆಕ್ಟ್ರಿಕ್ ಸ್ಟೇಷನ್	...	೧೫೦	ಎಂ.ಯು	
೩) ಭದ್ರಾ ಜನರೇಟಿಂಗ್ ಸ್ಟೇಷನ್	...	೦.೧೪	ಎ.ಯು	
೪) ನಾಗಜರಿ ಪವರ್ ಹೌಸ್ (ಕಾಳಿ ಪ್ರೊಜೆಕ್ಟ್ ೧)	...	೧೮೮೦	ಎಂ.ಯು	
೫) ಲಿಂಗನಮಕ್ಕಿ ಡ್ಯಾಮ್ ಪವರ್ ಹೌಸ್	...	೨೬೦	ಎಂ.ಯು	ಮಾರ್ಚಿಂಗಳಿನ